# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 82
ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 04.03.2025
ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಒಟ್ಟುಹಾಲು ಉತ್ಪಾದಕರ ಒಕ್ಕೂಟಗಳೆಷ್ಟು, ಹಾಲು ಉತ್ಪಾದಕರ ಸಹಕಾರ ಸಂಘಗಳು ಎಷ್ಟು; ನೊಂದಾಯಿತ ಹಾಲು ಉತ್ಪಾದಕರ ಸಂಖ್ಯೆ ಎಷ್ಟು; ದಿನಪ್ರತಿ ಎಷ್ಟು ಜನ ರೈತರು ಸರಬರಾಜು ಮಾಡುತ್ತಿದ್ದಾರೆ; ಹಾಲಿನ ಪ್ರೋತ್ಸಾಹಧನವನ್ನು ಪಡೆಯುತ್ತಿರುವ ರೈತರ ಸಂಖ್ಯೆ ಎಷ್ಟು ಆ ಪೈಕಿ ಸಾಮಾನ್ಯ ಪರಿಶಿಷ್ಟಜಾತಿ ಮತ್ತು ಪಂಗಡಗಳ ರೈತರ ಸಂಖ್ಯೆ ಎಷ್ಟು; | ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳದ ವ್ಯಾಪ್ತಿಯಲ್ಲಿ 16 ಜಿಲ್ಲಾ ಹಾಲು ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿವೆ.<br>ಒಟ್ಟು 15,887 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ ಒಟ್ಟು 26,68,937 ನೊಂದಾಯಿತ ಹಾಲು ಉತ್ಪಾದಕರು ಇದ್ದಾರೆ. ಪ್ರತಿ ದಿನ ಸರಾಸರಿ 9.0 ಲಕ್ಷ ಹಾಲು ಉತ್ಪಾದಕರು ಹಾಲು ಸರಬರಾಜು ಮಾಡುತ್ತಿದ್ದಾರೆ. ಒಟ್ಟು 904547 ರೈತರು ಪ್ರತಿ ಮಾಹೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಧನವನ್ನು ಪಡೆಯುತ್ತಿದ್ದಾರೆ.<br>ಆ ಪೈಕಿ ಸಾಮಾನ್ಯವರ್ಗದ ಹಾಲು ಉತ್ಪಾದಕರು-817074, ಪರಿಶಿಷ್ಟ ಜಾತಿಯ ಹಾಲು ಉತ್ಪಾದಕರು-52467 ಮತ್ತು ಪರಿಶಿಷ್ಟ ಪಂಗಡದ ಹಾಲು ಉತ್ಪಾದರು-35006 ಒಟ್ಟಾರೆ 904547 ಹಾಲು ಉತ್ಪಾದಕರು ಪ್ರೋತ್ಸಾಹ ಧನವನ್ನು ಪಡೆಯುತ್ತಿದ್ದಾರೆ. (**ಅನುಬಂಧ**-1 ರಲ್ಲಿ ಮಾಹಿತಿ ನೀಡಲಾಗಿದೆ) |
| ಆ) | ಹೈನುಗಾರಿಕೆ ನಡೆಸುವ ರೈತರಿಗೆ ಅನುಕೂಲವಾಗುವ ಉದ್ದೇಶದಿಂದ ವಿವಿಧ ಯೋಜನೆಯಡಿ ಪ್ರತಿ ಲೀಟರ್ ಹಾಲಿಗೆ ನೀಡಲಾಗುತ್ತಿರುವ ಪ್ರೋತ್ಸಾಹಧನ ಎಷ್ಟು; 2023-ಏಪ್ರಿಲ್ ತಿಂಗಳಿನಿಂದ 2025 ಫೆಬ್ರವರಿ ತಿಂಗಳ ಅಂತ್ಯದವರೆಗೆ ಎಷ್ಟು ಮೊತ್ತವನ್ನು ರೈತರಿಗೆ ಪ್ರೋತ್ಸಾಹಧನ ಯೋಜನೆಯಡಿ ಪಾವತಿ ಮಾಡಲಾಗಿದೆ; (ಪ್ರತಿ ತಿಂಗಳವಾರು ಮಾಹಿತಿ ನೀಡುವುದು) | ಹೈನುಗಾರಿಕೆ ನಡೆಸುವ ರೈತರಿಗೆ ರಾಜ್ಯ ಸರ್ಕಾರದಿಂದ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ರೂ.5/-ಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br>ಏಪ್ರಿಲ್ -2023 ರಿಂದ ಫೆಬ್ರುವರಿ-2025ರ ಅಂತ್ಯದವರೆಗೆ ರೂ.2661.70 ಕೋಟಿ ಪ್ರೋತ್ಸಾಹಧನ ಪಾವತಿಸಲಾಗಿರುತ್ತದೆ. (**ಅನುಬಂಧ-2** ರಲ್ಲಿ ಮಾಹಿತಿ ನೀಡಲಾಗಿದೆ.) |
| ಇ) | ಪ್ರೋತ್ಸಾಹಧನವನ್ನು ಪಾವತಿ ಮಾಡದೇ ಬಾಕಿ ಉಳಿಸಿಕೊಂಡಿರುವ ಮೊತ್ತವೆಷ್ಟು; ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ; ಬಾಕಿ ಉಳಿಸಿಕೊಂಡಿರುವುದು ಸರ್ಕಾರ ರೈತರಿಗೆ ಮಾಡಿರುವ ಅನ್ಯಾಯವಾಗುವುದಿಲ್ಲವೇ; ಯಾವ ಕಾಲಮಿತಿಯೊಳಗೆ ಪ್ರೋತ್ಸಾಹಧನವನ್ನು ಪಾವತಿಸಲು ಕ್ರಮವಹಿಸಲಾಗುವುದು; | ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ರೂ.613.5 ಕೋಟಿ, ಪರಿಶಿಷ್ಟ ಜಾತಿಯ ಹಾಲು ಉತ್ಪಾದಕರಿಗೆ ರೂ.18.29 ಕೋಟಿ, ಮತ್ತು ಪರಿಶಿಷ್ಟ ಪಂಗಡದ ಹಾಲು ಉತ್ಪಾದಕರಿಗೆ ರೂ. 24.20 ಕೋಟಿ ಪ್ರೋತ್ಸಾಹ ಧನ ಪಾವತಿಗೆ ಬಾಕಿ ಇರುತ್ತದೆ (**ಅನುಬಂಧ**-3 ರಲ್ಲಿ ಮಾಹಿತಿ ನೀಡಲಾಗಿದೆ).<br>2024-25 ನೇ ಸಾಲಿನಲ್ಲಿ ರೂ.1300.00 ಕೋಟಿ ಹಾಗು ಹೆಚ್ಚುವರಿ ಅನುದಾನ ರೂ.200.00 ಕೋಟಿ. ಒಟ್ಟಾರೆ ಪ್ರಸಕ್ತ ಸಾಲಿಗೆ ಬಿಡುಗಡೆಯಾದ ರೂ.1500.00 ಕೋಟಿಗಳಲ್ಲಿ, ಹಿಂದಿನ ಸಾಲುಗಳಲ್ಲಿ ಬಾಕಿಯಿದ್ದ ರೂ.614.24 ಕೋಟಿ ಪ್ರೋತ್ಸಾಹಧನ ಪಾವತಿಸಲಾಗಿರುತ್ತದೆ ಮತ್ತು ಉಳಿದ ಅನುದಾನದಲ್ಲಿ ಪ್ರಸಕ್ತ ಸಾಲಿನಲ್ಲಿ ಸೆಪ್ಟಂಬರ್-2024 |

| | | |
|---|---|---|
| | | ರವರೆಗೆ ರೂ.885.76 ಕೋಟಿ ಪ್ರೋತ್ಸಾಹಧನ ಪಾವತಿಸಲಾಗಿರುವುದರಿಂದ. ಸದರಿ ಸಾಲಿನಲ್ಲಿ ಪ್ರೋತ್ಸಾಹದನ ಪಾವತಿಸಲು ಬಾಕಿ ಇರುತ್ತದೆ. ಇದರಿಂದಾಗಿ ರಾಜ್ಯದ ರೈತರಿಗೆ ಪ್ರೋತ್ಸಾಹಧನ ಪಾವತಿಸುವಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಉಳಿದ ತಿಂಗಳುಗಳ ಬಾಕಿ ಇರುವ ಪ್ರೋತ್ಸಾಹ ಧನ ನೀಡುವ ಸಂಬಂಧ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. |
| ಈ) | ರೈತರಿಂದ ಸಂಗ್ರಹಿಸಿದ ಹಾಲು ನಂದಿನಿ ಹಾಗೂ ಇತರೆ ಜಿಲ್ಲಾ ಮಟ್ಟದ ಸಹಕಾರಿ ಹಾಲು ಮಾರಾಟ ಮಂಡಳಿ ಮೂಲಕ ವಿತರಣೆ ಹಾಗೂ ಮಾರಾಟವಾಗುತ್ತಿದ್ದು. ಹಾಲಿನ ಪ್ರೊತ್ಸಾಹಧನವನ್ನು ರೈತರಿಗೆ ನಿಗದಿತ ಸಮಯದಲ್ಲಿ ನೀಡಲು ಸರ್ಕಾರದ ಮುಂದಿರುವ ಸವಾಲುಗಳೇನು; | 2019-20ನೇ ಸಾಲಿನಲ್ಲಿ ಪ್ರತಿ ದಿನ ಸರಾಸರಿ 75.96 ಲಕ್ಷ ಲೀಟರ್, 2020-21 ಕ್ಕೆ 78.74 ಲಕ್ಷ ಲೀಟರ್, 2021-22 ಕ್ಕೆ 81.66 ಲಕ್ಷ ಲೀಟರ್, 2022-23 ಕ್ಕೆ 80.32 ಲಕ್ಷ ಲೀಟರ್, 2023-24 ಕ್ಕೆ 82.93 ಲಕ್ಷ ಲೀಟರ್ ಹಾಗು 2024-25 ನೇ ಸಾಲಿಗೆ ಪ್ರತಿ ದಿನ ಸರಾಸರಿ 90 ರಿಂದ 95 ಲಕ್ಷ ಲೀಟರ್ ಹಾಲು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತದಿಂದ ಸಂಗ್ರಹಣೆಯಾಗುತ್ತಿದೆ. ಈ ರೀತಿ ಪ್ರತಿ ವರ್ಷ ಹಾಲಿನ ಶೇಖರಣೆಯಲ್ಲಿ ಗಮನಾರ್ಹ ಹೆಚ್ಚಾಳವಾಗುತ್ತಿದ್ದು, ಹೆಚ್ಚಳವಾಗುತ್ತಿರುವ ಹಾಲಿನ ಶೇಖರಣೆಗೆ ಅನುಗುಣವಾಗಿ ಆಯವ್ಯಯದಲ್ಲಿ ಅನುದಾನ ನಿಗದಿಯಾಗದೇ ಇರುವುದರಿಂದ ಪ್ರೋತ್ಸಾಹಧನ ಪಾವತಿಗೆ ಬಾಕಿ ಉಳಿಯುತ್ತಿದೆ.<br><br>2019-20 ನೇ ಸಾಲಿನಲ್ಲಿ ರೂ.54.88 ಕೋಟಿ, 2020-21 ನೇ ಸಾಲಿಗೆ ರೂ.101.54 ಕೋಟಿ, 2021-22 ನೇ ಸಾಲಿಗೆ ರೂ.129.05 ಕೋಟಿ, 2022-23 ರಲ್ಲಿ ರೂ.208.58 ಕೋಟಿ, 2023-24 ನೇ ಸಾಲಿಗೆ ರೂ.202.85 ಕೋಟಿ ಪ್ರೋತ್ಸಾಹಧನ ಪಾವತಿಗೆ ಬಾಕಿ ಉಳಿದಿರುತ್ತದೆ. ಈ ರೀತಿ ಹಾಲಿನ ಪ್ರೋತ್ಸಾಹಧನ ಪಾವತಿಗೆ ಪ್ರತಿವರ್ಷ ಬಾಕಿ ಉಳಿಯುತ್ತಿದೆ. ಪ್ರತಿ ವರ್ಷ ಬಿಡುಗಡೆಯಾದ ಅನುದಾನದಲ್ಲಿ, ಆದ್ಯತೆಯ ಮೇರೆಗೆ ಹಿಂದಿನ ಸಾಲಿನ ಬಾಕಿಯಿದ್ದ ಪ್ರೋತ್ಸಾಹಧನ ಪಾವತಿಸುವುದರಿಂದ ಅದೇ ಆರ್ಥಿಕ ಸಾಲಿನ ಪ್ರೋತ್ಸಾಹಧನ ಪಾವತಿಗೆ ಅನುದಾನ ಕೊರತೆಯಾಗುತ್ತಿದೆ.<br><br>ಪ್ರಸಕ್ತ 2024-25ನೇ ಸಾಲಿನಲ್ಲಿ ರೂ.1300.00 ಕೋಟಿ ಹಾಗು ಹೆಚ್ಚುವರಿಯಾಗಿ ಬಿಡುಗಡೆಯಾದ ಅನುದಾನ ರೂ.200.00 ಕೋಟಿ. ರೂ.1500.00 ಕೋಟಿಗಳ ಅನುದಾನದಲ್ಲಿ ಹಿಂದಿನ ಸಾಲುಗಳ ಬಾಕಿಯಿದ್ದ ರೂ.614.24 ಕೋಟಿ ಪ್ರೋತ್ಸಾಹಧನ ಪಾವತಿಸಿದ ನಂತರ ಪ್ರಸಕ್ತ ಸಾಲಿನ ಪ್ರೋತ್ಸಾಹಧನ ರೂ.885.76 ಕೋಟಿ ಪಾವತಿಸಲಾಗಿರುವುದರಿಂದ ಪ್ರಸಕ್ತ ಸಾಲಿನ ಪ್ರೋತ್ಸಾಹಧನ ಪಾವತಿಗೆ ಬಾಕಿ ಉಳಿದು ವಿಳಂಬವಾಗಿರುತ್ತದೆ. |
| ಉ) | ಹಾಲಿನ ಪ್ರೊತ್ಸಾಹಧನವನ್ನು ಕಡ್ಡಾಯವಾಗಿ ಫಲಾನುಭವಿಗಳಿಗೆ ನಿಗದಿತ ಸಮಯದಲ್ಲಿ ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಬಾಕಿ ಇರುವ ಪ್ರೋತ್ಸಾಹಧನ ನೀಡುವ ಸಂಬಂಧ ಪ್ರಸ್ತಾವನೆ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದ್ದು, ಆರ್ಥಿಕ ಇಲಾಖೆಯಿಂದ ಹೆಚ್ಚುವರಿ ಅನುದಾನ ಬಿಡುಗಡೆಯಾದ ತಕ್ಷಣ ಬಾಕಿಯಿರುವ ಪ್ರೋತ್ಸಾಹಧನ ಪಾವತಿಗೆ ಕ್ರಮವಹಿಸಲಾಗುವುದು. |

ಸಂಖ್ಯೆ: ಪಸಂಮೀ 14 ಕಹಾಮ 2025

**(ಕೆ.ವೆಂಕಟೇಶ್)**

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

ಅನುಬಂಧ-1

**ಹಾಲಿನ ಪ್ರೋತ್ಸಾಹ ಧನ ಪಡೆಯುತ್ತಿರುವ ರೈತರ ಜಿಲ್ಲಾವಾರು ಮತ್ತು ವರ್ಗವಾರುವಿವರ.**

| ಕ್ರ.ಸಂ | ಜಿಲ್ಲೆ | ಸಾಮಾನ್ಯವರ್ಗ | ಪ.ಜಾತಿ | ಪ.ಪಂ |
|---|---|---|---|---|
| 1 | ಬಾಗಲಕೋಟೆ | 14157 | 908 | 592 |
| 2 | ಬಳ್ಳಾರಿ | 1252 | 80 | 52 |
| 3 | ಬೆಳಗಾವಿ | 28348 | 1827 | 1320 |
| 4 | ಬೆಂಗಳೂರುನಗರ | 15899 | 1025 | 740 |
| 5 | ಬೆಂಗಳೂರುಗ್ರಾಮಾಂತರ | 30945 | 1994 | 1440 |
| 6 | ಬೀದರ್ | 5049 | 324 | 211 |
| 7 | ಚಾಮರಾಜನಗರ | 29269 | 1886 | 1362 |
| 8 | ಚಿಕ್ಕಬಳ್ಳಾಪುರ | 35645 | 2297 | 1659 |
| 9 | ಚಿಕ್ಕಮಗಳೂರು | 14265 | 915 | 596 |
| 10 | ಚಿತ್ರದುರ್ಗ | 17561 | 1126 | 734 |
| 11 | ದಕ್ಷಿಣಕನ್ನಡ | 26306 | 1687 | 1100 |
| 12 | ದಾವಣಗೆರೆ | 31472 | 2019 | 1316 |
| 13 | ಧಾರವಾಡ | 10826 | 694 | 453 |
| 14 | ಗದಗ | 7021 | 450 | 294 |
| 15 | ಹಾಸನ | 76480 | 4906 | 3197 |
| 16 | ಹಾವೇರಿ | 21417 | 1374 | 895 |
| 17 | ಕಲಬುರಗಿ | 4010 | 257 | 108 |
| 18 | ಕೊಡಗು | 2187 | 140 | 91 |
| 19 | ಕೋಲಾರ | 38300 | 2457 | 1601 |
| 20 | ಕೊಪ್ಪಳ | 10036 | 644 | 420 |
| 21 | ಮಂಡ್ಯ | 91565 | 5873 | 3828 |
| 22 | ಮೈಸೂರು | 93313 | 5986 | 3901 |
| 23 | ರಾಯಚೂರು | 3213 | 206 | 134 |
| 24 | ರಾಮನಗರ | 51315 | 3307 | 2389 |
| 25 | ಶಿವಮೊಗ್ಗ | 31843 | 2043 | 1331 |
| 26 | ತುಮಕೂರು | 75485 | 4842 | 3156 |
| 27 | ಉಡುಪಿ | 20686 | 1326 | 865 |
| 28 | ಉತ್ತರಕನ್ನಡ | 10173 | 653 | 425 |
| 29 | ವಿಜಯನಗರ | 14796 | 949 | 619 |
| 30 | ವಿಜಯಪುರ | 4086 | 262 | 171 |
| 31 | ಯಾದಗಿರಿ | 154 | 10 | 6 |
| ಒಟ್ಟು | | **817074** | **52467** | **35006** |

## ಅನುಬಂಧ-2

**ಏಪ್ರಿಲ್-2023 ರಿಂದಫೆಬ್ರುವರಿ -2025ರ ಅಂತ್ಯದವರೆಗೆ ಹಾಲು ಉತ್ಪಾದಕರಿಗೆ ಪಾವತಿಸಿರುವ ಪ್ರೋತ್ಸಾಹ ಧನದ ತಿಂಗಳವಾರು ಮಾಹಿತಿ.**

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಮಾಹೆ | ಪ್ರೋತ್ಸಾಹ ಧನ ಪಾವತಿಸಿರುವ ಮೊತ್ತ |
|---|---|---|
| 1 | ಏಪ್ರಿಲ್-2023 | 0 |
| 2 | ಮೇ-2023 | 0 |
| 3 | ಜೂನ್-2023 | 287.19 |
| 4 | ಜುಲೈ-2023 | 76.01 |
| 5 | ಆಗಸ್ಟ್-2023 | 333.57 |
| 6 | ಸೆಪ್ಟೆಂಬರ್-2023 | 41.43 |
| 7 | ಅಕ್ಟೋಬರ್-2023 | 3.07 |
| 8 | ನವೆಂಬರ್-2023 | 25.37 |
| 9 | ಡಿಸೆಂಬರ್-2023 | 121.88 |
| 10 | ಜನವರಿ-2024 | 19.45 |
| 11 | ಫೆಬ್ರುವರಿ-2024 | 195.24 |
| 12 | ಮಾರ್ಚ್-2024 | 58.59 |
| 13 | ಏಪ್ರಿಲ್-2024 | 0 |
| 14 | ಮೇ-2024 | 21.17 |
| 15 | ಜೂನ್-2024 | 300.04 |
| 16 | ಜುಲೈ-2024 | 300.93 |
| 17 | ಆಗಸ್ಟ್-2024 | 20.46 |
| 18 | ಸೆಪ್ಟೆಂಬರ್-2024 | 7.15 |
| 19 | ಅಕ್ಟೋಬರ್-2024 | 103.10 |
| 20 | ನವೆಂಬರ್-2024 | 202.12 |
| 21 | ಡಿಸೆಂಬರ್-2024 | 169.17 |
| 22 | ಜನವರಿ-2025 | 86.88 |
| 23 | ಫೆಬ್ರುವರಿ-2025 | 288.88 |
| ಒಟ್ಟು | | **2661.70** |

ಅನುಬಂಧ-3

**ಜಿಲ್ಲಾವಾರು ಪಾವತಿಗೆ ಬಾಕಿ ಇರುವ ಪ್ರೋತ್ಸಾಹ ಧನದ ವರ್ಗವಾರು ವಿವರ**

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಜಿಲ್ಲೆ | ಸಾಮಾನ್ಯವರ್ಗ | ಪ.ಜಾತಿ | ಪ.ಪಂ |
|---|---|---|---|---|
| 1 | ಬಾಗಲಕೋಟೆ | 6.17 | 0.15 | 0.13 |
| 2 | ಬಳ್ಳಾರಿ | 0.55 | 0.01 | 0.07 |
| 3 | ಬೆಳಗಾವಿ | 18.33 | 0.25 | 0.7 |
| 4 | ಬೆಂಗಳೂರುನಗರ | 28.95 | 1.36 | 1.54 |
| 5 | ಬೆಂಗಳೂರುಗ್ರಾಮಾಂತರ | 36.69 | 0.88 | 0.38 |
| 6 | ಬೀದರ್ | 1.91 | 0.19 | 0.49 |
| 7 | ಚಾಮರಾಜನಗರ | 14.15 | 0.89 | 0.88 |
| 8 | ಚಿಕ್ಕಬಳ್ಳಾಪುರ | 26.4 | 1.89 | 3.92 |
| 9 | ಚಿಕ್ಕಮಗಳೂರು | 8.93 | 0.41 | 0.09 |
| 10 | ಚಿತ್ರದುರ್ಗ | 10.08 | 0.29 | 1.06 |
| 11 | ದಕ್ಷಿಣಕನ್ನಡ | 15.65 | 0.18 | 0.94 |
| 12 | ದಾವಣಗೆರೆ | 16.45 | 0.69 | 1.33 |
| 13 | ಧಾರವಾಡ | 4.13 | 0.03 | 0.75 |
| 14 | ಗದಗ | 2.55 | 0.15 | 0.14 |
| 15 | ಹಾಸನ | 68.12 | 2.4 | 0.86 |
| 16 | ಹಾವೇರಿ | 9.36 | 0.34 | 0.74 |
| 17 | ಕಲಬುರಗಿ | 1.92 | 0.041 | 0.084 |
| 18 | ಕೊಡಗು | 1.04 | 0.019 | 0.025 |
| 19 | ಕೋಲಾರ | 41.68 | 2.49 | 2.63 |
| 20 | ಕೊಪ್ಪಳ | 3.78 | 0.089 | 0.28 |
| 21 | ಮಂಡ್ಯ | 86.99 | 0.54 | 0.2 |
| 22 | ಮೈಸೂರು | 43.25 | 1.38 | 2.12 |
| 23 | ರಾಯಚೂರು | 1.29 | 0.049 | 0.15 |
| 24 | ರಾಮನಗರ | 59.67 | 1.29 | 0.79 |
| 25 | ಶಿವಮೊಗ್ಗ | 19.74 | 0.79 | 0.75 |
| 26 | ತುಮಕೂರು | 59.98 | 0.92 | 2.15 |
| 27 | ಉಡುಪಿ | 9.96 | 0.086 | 0.53 |
| 28 | ಉತ್ತರಕನ್ನಡ | 3.19 | 0.031 | 0.021 |
| 29 | ವಿಜಯನಗರ | 8.56 | 0.38 | 0.39 |
| 30 | ವಿಜಯಪುರ | 4.04 | 0.069 | 0.033 |
| 31 | ಯಾದಗಿರಿ | 0.07 | 0.009 | 0.029 |
| ಒಟ್ಟು | | 613.58 | 18.293 | 24.202 |